# ಧೀರಮಾತಾ

ವಿ. ಮೀನಾ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

**ಸ್ವಾ**ಮಿ ವಿವೇಕಾನಂದರು ಸಾರಾ, ನಿವೇದಿತಾ, ಇನ್ನಿತರರೊಡನೆ ಈಗ ಹಿಮಾಲಯದ ಕಡೆ ಯಾತ್ರೆ ಹೊರಟರು. ನೈನಿತಾಲ್ ಆಲ್ಮೋರಾ ಮುಂತಾದ ಸ್ಥಳಗಳು ಸಾರಾರಿಗೆ ಸೌಂದರ್ಯದಿಂದ ತುಂಬಿರುವಂತೆ ಕಂಡವು. ಅಲ್ಲಿ ನಿವೇದಿತಾ, ಜೋ, ಇನ್ನಿತರರು ಸಾರಾರ ಪ್ರೇಮದಿಂದ ಪುಲಕಿತರಾದರು. ಒಂದು ಪತ್ರದಲ್ಲಿ ನಿವೇದಿತಾ "ಪರ್ವತದ ತಪ್ಪಲಿನ ಈ ಧನ್ಯತೆಯ ಮನೆಯಲ್ಲಿ ಎಂತಹ ಸರಳತೆ, ಉದಾರತೆ ತುಂಬಿವೆ ಎಂಬುದನ್ನು ನಾನು ಬರೆದು ವಿವರಿಸಲಾರೆ. ಶ್ರೀಮತಿ ಸಾರಾ ಬುಲ್ಲರು ಮೂರ್ತಿಮತಿಯಾದ ಪ್ರೇಮವಾಗಿದ್ದಾರೆ, ಜೋ ಅಗ್ನಿಯಂತಿದ್ದಾಳೆ" ಎಂದು ಬರೆಯುತ್ತಾರೆ. ಒಂದು ದಿನ ವಿವೇಕಾನಂದರು ಪಿಟೀಲಿನಂತೆ ಕಾಣುವ ಒಂದು ಗೊಂಬೆಯನ್ನು ತಂದು ಸಾರಾರಿಗೆ ನೀಡಿದರು. ಆಕೆ ಅದನ್ನು ತಮ್ಮ ಇಡೀ ಜೀವನ ಇಟ್ಟುಕೊಂಡಿದ್ದರು. ಆಕೆಯ ಜೀವನದ ಎರಡು ಮುಖ್ಯ ಸೂತ್ರಗಳು : ಒಂದು ಸಂಗೀತ, ಮತ್ತೊಂದು ಭಾರತದೇಶ.

ಸ್ವಾಮಿ ವಿವೇಕಾನಂದರು, ಸಾರಾ, ಮತ್ತಿತರರು ಕಾಶ್ಮೀರಕ್ಕೆ ಹೋಗಿ ಅಲ್ಲಿನ ಮನೆದೋಣಿ(House Boat)ಯಲ್ಲಿ ಆನಂದದಿಂದ ಕಾಲ ಕಳೆದರು. ಶ್ರೀನಗರದಲ್ಲಿನ ಕಲಾತ್ಮಕ ವಸ್ತುಗಳನ್ನು ಕಂಡು ಸಾರಾ ಬೆರಗಾದರು. ಮುಂದೆ ಅವರು ಕ್ಷೀರಭವಾನಿಗೆ ಹೋದರು. ಅಲ್ಲಿ ಸ್ವಾಮಿ ವಿವೇಕಾನಂದರು ಕ್ಷೀರಭವಾನಿಯನ್ನು ವಿಶೇಷವಾಗಿ ಪೂಜಿಸಿದರು. ಆದರೆ ಸ್ವಾಮೀಜಿ ಅಮರನಾಥ ಯಾತ್ರೆಗೆ ಮುಂದುವರೆದಾಗ ಅವರೊಡನೆ ಬೇರಾರೂ ಇರಲಿಲ್ಲ, ನಿವೇದಿತೆಯನ್ನು ಬಿಟ್ಟು. ಹಿಮಾಲಯದ ಮಡಿಲಲ್ಲಿ, ಸ್ವಾಮಿ ವಿವೇಕಾನಂದರ ಸಾನ್ನಿಧ್ಯದಲ್ಲಿ ಸಾರಾರ ಆನಂದಕ್ಕೆ ಪಾರವೇ ಇರಲಿಲ್ಲ. ಒಂದು ದಿನ ಮಾತಿನ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರು ಸಾರಾರನ್ನು ಕುರಿತು, "ನಾನು ದೈವೀಪ್ರೇರಣೆ ಹೊಂದಿದಂತೆ, ನೀನೂ ಹೊಂದಿರುವೆ. ನೀನು ಕೇವಲ ನನ್ನನ್ನು ಅನುಕರಿಸುವವಳಲ್ಲ. ನೀನು ನಿನ್ನದೇ ಆದ ಸ್ವಾತಂತ್ರ್ಯದಲ್ಲಿ ಓರ್ವ ಪೂರ್ಣ ಆಧ್ಯಾತ್ಮಿಕ ವ್ಯಕ್ತಿ" ಎಂದು ಹೇಳಿದರು.

ಸಾರಾರ ಜೀವನದ ಮತ್ತೊಂದು ನೋವಿನ ಸುದ್ದಿ ಅವರನ್ನು ಮುಟ್ಟುತ್ತದೆ. ಅದು ಆಕೆಯ ಮೊಮ್ಮಗಳು ಎಡ್ವಿನಾಳ ಮರಣ. ಮಗಳು ಓಲಿಯಾ ಸಾರಾರ ನೋವಿಗೆ ಹೆಚ್ಚಿನ ಮಟ್ಟಿಗೆ ಕಾರಣರಾಗಿದ್ದರೂ ಈ ಮೊಮ್ಮಗು ಸಾರಾರಿಂದ ಬಹುಪಾಲಿನ ಪ್ರೀತಿಯನ್ನು ಪಡೆದಿತ್ತು. ಸುಮಾರು ಒಂದೂವರೆ ವರ್ಷ ಕಾಯಿಲೆಯಿಂದ ನರಳಿ ಆ ಮಗು ದೈವಾಧೀನವಾಯಿತು. ಆ ಸುದ್ದಿಯನ್ನು ಪಡೆದ ದಿನದ ಇಡೀ ರಾತ್ರಿ ಸ್ವಾಮಿ ವಿವೇಕಾನಂದರು ಸಾರಾರ



ಬಳಿ ಕುಳಿತು ಸ್ಫೂರ್ತಿದಾಯಕ ಮಾತುಗಳನ್ನಾಡಿದರು. ಸಾರಾ ತಕ್ಷಣ ನಾರ್ವೆಗೆ ಹೋಗಬಯಸಿದರೂ, ಅದರಿಂದ ಏನೂ ಪ್ರಯೋಜನವಿಲ್ಲವೆಂದು ಅರಿತು, ಮಗಳು ಓಲಿಯಾಗೆ ಒಂದು ಪತ್ರ ಬರೆದು, ಅದರಲ್ಲಿ ಜೀವನದ ನಶ್ವರತೆಯನ್ನು ಅರುಹಿ, ಎಡ್ವಿನಾಳ ಜೀವನ ಹಾಗೂ ಪ್ರೀತಿ, ಮುಂದೆ ಓಲಿಯಾಳಿಗೆ ಅತ್ಯಂತ ಪ್ರಿಯವೂ ನಿಕಟವೂ ಆಗುವುದೆಂದು ತಿಳಿಸಿದರು. ಸ್ವಾಮಿ ಶಾರದಾನಂದರು ತಕ್ಷಣ ಸಾರಾರಿಗೆ ಪತ್ರ ಬರೆದು ಶ್ರೀರಾಮಕೃಷ್ಣರ ಅನಂತಕೃಪೆ ಆಕೆಯ ಮೇಲೆ ಇರುವುದಾಗಿಯೂ, ಅವರ ದಿವ್ಯಶಕ್ತಿ ವ್ಯಕ್ತವಾಗಲು ಸಾರಾರನ್ನು ಒಂದು ಉಪಕರಣವಾಗಿ ಉಪಯೋಗಿಸುತ್ತಿದ್ದಾರೆಂದೂ ತಿಳಿಸಿದರು. ಸಾರಾರಿಗೆ ಸ್ವಾಮಿ ವಿವೇಕಾನಂದರ ಜೊತೆಯಲ್ಲಿ ಹೆಚ್ಚು ದಿನ ಇರುವ ಆಸೆಯಿದ್ದರೂ, ಸ್ವಾಮೀಜಿಯವರು ಅನಾರೋಗ್ಯದ ನಿಮಿತ್ತ ಉತ್ತರ ಭಾರತಕ್ಕೆ ಹೋಗದೆ ನೇರವಾಗಿ ಬೇಲೂರು ಮಠಕ್ಕೆ ಹಿಂದಿರುಗಿದರು. ಸಾರಾ ಉತ್ತರ ಭಾರತದ ಕೆಲವು ಸ್ಥಳಗಳಿಗೆ ಭೇಟಿಯಿತ್ತು, ಮಠಕ್ಕೆ ಹಿಂದಿರುಗುವಾಗ ಎರಡು ಉಣ್ಣೆಯ ಶಾಲುಗಳನ್ನು ತಂದಿದ್ದರು—ಒಂದು ಸ್ವಾಮಿ ವಿವೇಕಾನಂದರ ತಾಯಿಗಾಗಿ,

ಮತ್ತೊಂದು ಶಾರದಾನಂದ ಸ್ವಾಮಿಗಳ ತಾಯಿಗಾಗಿ. ಈ ಇಬ್ಬರು ಸ್ವಾಮಿಗಳ ಪೂರ್ವಾಶ್ರಮದ ಕುಟುಂಬಗಳಿಗೆ ಸಾರಾ ಯಥೇಚ್ಛ ವಾಗಿ ಆರ್ಥಿಕ ಸಹಾಯವನ್ನು ಮಾಡಿದ್ದರು.

ಕಲ್ಕತ್ತೆಗೆ ಹಿಂದಿರುಗಿದ ಸಾರಾ, ನಿವೇದಿತಾ ಮತ್ತಿತರರು ಶ್ರೀಮಾತೆ ಶಾರದಾದೇವಿಯವರನ್ನು ದರ್ಶಿಸಿ, ಅವರ ಕೆಲವು ಭಾವಚಿತ್ರಗಳನ್ನು ಅವರ ಅನುಮತಿ ಪಡೆದು ತೆಗೆದುಕೊಳ್ಳುತ್ತಾರೆ. ಉದ್ದೇಶ ಅದನ್ನು ಅಮೇರಿಕಕ್ಕೆ ತೆಗೆದುಕೊಂಡು ಹೋಗಿ ಪೂಜಿಸು ವುದು. ಸಾರಾರ ಈ ಮಹತ್ ಕಾರ್ಯದಿಂದ ಈಗ ಇಡೀ ವಿಶ್ವದಲ್ಲಿ ಶ್ರೀಮಾತೆ ಶಾರದಾದೇವಿಯವರ ಭಾವಚಿತ್ರಗಳು ಪೂಜೆ ಗಾಗಿ ಲಭ್ಯವಾಗಿವೆ. ಬಾಲಿ ಎಂಬ ಬೇಲೂರು ಮಠದ ಹತ್ತಿರದ ಸ್ಥಳದಲ್ಲಿ ಸಾರಾ ಮತ್ತು ಜೋ ಇಬ್ಬರೂ ಮನೆ ಮಾಡಿಕೊಂಡು ನೆಲೆಸುತ್ತಾರೆ. ಅದೇ ಸಂದರ್ಭದಲ್ಲಿ ನಡೆದ ನಿವೇದಿತೆಯ ಶಾಲೆಯ ಉದ್ಘಾಟನಾ ಸಮಾರಂಭದಲ್ಲಿ ಸಾರಾ ಮತ್ತು ಜೋ ಇಬ್ಬರೂ ಹಾಜರಿದ್ದರು. ಶ್ರೀಮಾತೆ ಶಾರದಾದೇವಿಯವರ ದಿವ್ಯಸಾನ್ನಿಧ್ಯದಲ್ಲಿ ಶಾಲೆ ಪ್ರಾರಂಭವಾಯಿತು.

೧೮೯೮ರಲ್ಲಿ ಸಾರಾ ಮತ್ತು ಜೋ ತಮ್ಮ ದೇಶಕ್ಕೆ ಹಿಂತಿ ರುಗುವ ತಯ್ಯಾರಿಯಲ್ಲಿದ್ದರು. ಸಾರಾ ಯಾವ ಉದ್ದೇಶಕ್ಕಾಗಿ ಭಾರತಕ್ಕೆ ಬಂದಿದ್ದರೋ ಅದು ಸಫಲವಾಗಿತ್ತು—ಸ್ವಾಮಿ ವಿವೇಕಾ ನಂದರ ಸ್ವಪ್ನ ಸತ್ಯವಾಗಿತ್ತು, ಬೇಲೂರು ಮಠ ಪ್ರಾರಂಭವಾಗಿ ಅಲ್ಲಿ ಅನೇಕ ಜೀವಕಲ್ಯಾಣ ಕಾರ್ಯಕ್ರಮಗಳು ನಡೆಯುತ್ತಿದ್ದವು. ಇವೆಲ್ಲವೂ ಸಾರಾರನ್ನು ಯಾವುದೊ ದಿವ್ಯ ಭಾವತರಂಗಗಳಿಗೆ ಕರೆದೊಯ್ಯಿತು. ಸಾರಾ ಮತ್ತು ಜೋ ಇಬ್ಬರಿಗೂ ಮಠದಲ್ಲಿ ಒಂದುದಿನ ಬೀಳ್ಕೊಡುಗೆಯ ಕಾರ್ಯಕ್ರಮವನ್ನು ಇಟ್ಟು ಕೊಂಡಿದ್ದರು. ಆ ದಿನ ಶಾರದಾನಂದರು ಅವರೀರ್ವರನ್ನು ಬೀಳ್ಕೊಡಲು ಅತ್ಯಂತ ದುಃಖಿತರಾಗಿದ್ದರು. ಸಾರಾ ಮತ್ತು ಜೋ ಭಾರತದಿಂದ ಹೊರಟುಹೋದಮೇಲೆ ಸ್ವಾಮಿ ವಿವೇಕಾನಂದರು ಅವರನ್ನು ಕುರಿತು ನಿವೇದಿತೆಯೊಂದಿಗೆ ಹೀಗೆ ಹೇಳುತ್ತಾರೆ, "ಓ, ಸಾರಾ ಹಾಗೂ ಜೋ ಮತ್ತೆ ಭಾರತಕ್ಕೆ ಮರಳಿ ಭಾರತೀಯರ ನಡುವೆ ಇರುವುದಾದರೆ ಭಾರತೀಯರು ಅವರಿಂದ ಸ್ಫೂರ್ತಿ ಗೊಳ್ಳುತ್ತಾರೆ. ಅವರೀರ್ವರ ಅಂತಹ ಮಧುರವೂ ರಮ್ಯವೂ ಆದ ನಡವಳಿಕೆಯಿಂದಾಗಿ ಅವರ ಮನಸ್ಸು ಹಾಗೂ ಆತ್ಮ ಬಹು ಉನ್ನತಮಟ್ಟದ್ದಾಗಿವೆ."

ಸಾರಾರ ಮಾತೃಪ್ರೇಮವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಂಡು, ಸ್ವಾಮಿ ಶಾರದಾನಂದರು ಆಕೆಗೆ ಒಂದು ಪತ್ರ ಬರೆದರು : "ಭಗವಂತನ ಕೃಪಾಶೀರ್ವಾದಗಳು ನಿಮ್ಮ ಮೇಲೆ ಸದಾ ನೆಲೆಸಿದೆ. ನನ್ನನ್ನು ನೀವು ಹರಸಿರಿ. ಸದಾ ಪ್ರಾರ್ಥನೆ ಮತ್ತು ವಂದನೆಗಳು ಪೂಜ್ಯ ಉಮಾಳ ಚರಣಕಮಲಗಳಲ್ಲಿ." 'ಉಮಾ' ಎಂಬ ಶಿವನ ಸತಿಯ ಹೆಸರನ್ನು ಶಾರದಾನಂದರು ಸಾರಾರಿಗೆ ನೀಡಿದ್ದರು.

ಸಾರಾ ಮತ್ತು ಜೋ ಇಬ್ಬರೂ ಲಂಡನ್‌ನಲ್ಲಿ ಮ್ಯಾಕ್ಸ್ ಮುಲ್ಲರ್, ಸ್ಟರ್ಡಿ ಮುಂತಾದವರನ್ನು ಸಂಧಿಸಿದರು. ಸ್ಟರ್ಡಿ ಸಾರಾರನ್ನು ಸೀಸೇಮ್ ಕ್ಲಬ್‌ಗೆ ಕರೆದುಕೊಂಡು ಹೋಗಿ ಅಲ್ಲಿ, ಭಾರತದ ಬಗೆಗೆ ಮತ್ತು ನಿವೇದಿತೆಯ ಶಾಲೆಯ ಬಗೆಗೆ ಮಾತ ನಾಡಬೇಕೆಂದು ಅವರನ್ನು ಕೇಳಿಕೊಂಡರು. ಮೊದಲು ಸಂಕೋಚ ಪಟ್ಟರೂ, ಜೋ ನೀಡಿದ ಪ್ರೋತ್ಸಾಹದಿಂದ ಸಾರಾ ಗಂಭೀರವಾದ ಭಾಷಣವನ್ನು ಮಾಡಿ ಎಲ್ಲರನ್ನೂ ಮುಗ್ಧಗೊಳಿಸಿದರು. ಸಾರಾ ಅಲ್ಲಿ ನೆರೆದವರಿಗೆ ಭಾರತದಲ್ಲಿ ಹೊಸದಾಗಿ ಆರಂಭವಾಗಿರುವ ಆಧ್ಯಾತ್ಮಿಕ ಜಾಗೃತಿ ಹಾಗೂ ಶೈಕ್ಷಣಿಕ ಆದರ್ಶಗಳ ಕುರಿತಾಗಿಯೂ ವಿವರಿಸಿ ಹೇಳಿದರು. ಅವರು ಭಾರತದ ನಾರಿ ಯರಿಗಾಗಿ ಮಾಡಬೇಕಾದ ಕಾರ್ಯಗಳು ಹೇಗೆ ಮುಂದೆ ಇಡೀ ಮಾನವತ್ವವನ್ನು ಪ್ರಭಾವಗೊಳಿಸುವುದು ಎಂದೂ ವಿವರಿಸಿದರು. ಅಲ್ಲಿಯವರೆಲ್ಲಾ ನಿವೇದಿತೆ ಹಾಗೂ ಆಕೆಯ ಶಾಲೆಯ ಬಗೆಗೆ ಅರಿಯಲು ಕಾತರಗೊಂಡರು. ಸಾರಾರ ಭಾಷಣ ಎಷ್ಟು ಚೆನ್ನಾಗಿ ತ್ತೆಂದರೆ ಅವರೆಲ್ಲರೂ ಆಕೆಯನ್ನು ಆ ಕ್ಲಬ್‌ನ ಸದಸ್ಯೆಯಾಗಿ ಆಯ್ಕೆ ಮಾಡಿದರು. ಜೋ ಸಾರಾರ ಭಾಷಣ ಎಷ್ಟು ಸುಂದರ ವಾಗಿತ್ತೆಂದು ನಿವೇದಿತೆಗೆ ಬರೆದು ತಿಳಿಸಿದರು.

೧೮೯೯ರಲ್ಲಿ ಸಾರಾಗೆ ೪೯ ವರ್ಷ ತುಂಬುತ್ತದೆ. ಆ ಸುದಿನ ಕ್ಕಾಗಿ ಸಾರಾಳನ್ನು ಹರಸಿ ನಿವೇದಿತಾ ಒಂದು ಪತ್ರ ಬರೆದರು. ನಿವೇದಿತೆಯ ಭಾರತದ ಕೆಲಸಕ್ಕೆ ಸಾರಾ ಪೂರ್ಣವಾದ ನೈತಿಕ ಹಾಗೂ ಆರ್ಥಿಕ ಸಹಾಯವನ್ನು ನೀಡಿದ್ದರು. ನಿವೇದಿತಾ ಸಾರಾರ ಹುಟ್ಟುಹಬ್ಬದ ಪ್ರಯುಕ್ತ ಸ್ವಾಮಿ ವಿವೇಕಾನಂದರಿಂದ ಪವಿತ್ರ ವಾಗಿಸಲ್ಪಟ್ಟ ಒಂದು ಬಿಲ್ವಪತ್ರವನ್ನು ಸಾರಾಗೆ ಕಳುಹಿಸಿದರು. ೧೮೯೯ರಲ್ಲಿ ತಮ್ಮ ಆರೋಗ್ಯವನ್ನು ಸುಧಾರಿಸಿಕೊಳ್ಳಲು ಸ್ವಾಮಿ ವಿವೇಕಾನಂದರು ತುರೀಯಾನಂದರು ಹಾಗೂ ನಿವೇದಿತೆ ಯರನ್ನೊಡಗೂಡಿ ಮತ್ತೊಮ್ಮೆ ಪಾಶ್ಚಾತ್ಯ ರಾಷ್ಟ್ರಗಳಿಗೆ ತೆರಳು ತ್ತಾರೆ. ಸ್ವಾಮೀಜಿ ಅಮೆರಿಕದ ರಿಡ್ಜ್‌ಲಿ ಮೇನರ್‌ನಲ್ಲಿ ಲೆಗೆಟ್‌ರ ಅತಿಥಿಯಾಗಿ ಉಳಿದುಕೊಳ್ಳುತ್ತಾರೆ. ಸಾರಾರನ್ನು ಅಲ್ಲಿಗೆ ಆಹ್ವಾನಿಸಿ ಅವರಿಗೆ ಒಂದು ಪತ್ರ ಬರೆದರು. ಸಾರಾಗೆ ತಕ್ಷಣ ಬರಲು ಸಾಧ್ಯವಾಗಲಿಲ್ಲ. ಸಾರಾ ರಿಡ್ಜ್‌ಲಿ ಮೇನರ್‌ಗೆ ಬರಲು ಆಕೆಯ ಮಗಳ ಕಾಯಿಲೆ ಅಡ್ಡವಾಗುತ್ತದೆ. ಆಗ ಸ್ವಾಮಿ ವಿವೇಕಾನಂದರು ಸಾರಾರಿಗೆ ಇನ್ನೊಂದು ಪತ್ರ ಬರೆದು, "ನಾನೇ ಅಲ್ಲಿಗೆ ಬರಲೇ? ಎಲ್ಲವೂ ಸರಿಹೋಗುತ್ತದೆ" ಎಂದು ತಿಳಿಸಿದರು. 'Peace'(ಶಾಂತಿ) ಎಂಬ ಒಂದು ಸುಂದರವಾದ ಪದ್ಯವನ್ನು ಸ್ವಾಮಿ ವಿವೇಕಾನಂದರು ರಿಡ್ಜ್‌ಲಿ ಮೇನರ್‌ನಲ್ಲಿ ಬರೆದು ಅದನ್ನು ಸಾರಾರಿಗಾಗಿ ಅನಂತ ಪ್ರೇಮದೊಂದಿಗೆ ನಿವೇದಿಸುತ್ತಾರೆ. ಇದು ಸಾರಾರನ್ನು ಆಳವಾಗಿ ಸ್ಪರ್ಶಿಸುತ್ತದೆ. ಕಡೆಗೆ ಅಕ್ಟೋಬರ್ ೭, ೧೮೯೯ರಲ್ಲಿ ಸಾರಾ ರಿಡ್ಜ್‌ಲಿ ಮೇನರ್‌ಗೆ ಬಂದರು. ಆಕೆ ಬಂದ ಕೆಲವು ದಿನಕ್ಕೆ ಸಾರಾರ ಮಗಳು ಓಲಿಯಾ ತನ್ನ ಸ್ವೇಚ್ಛಾಚಾರದ ಸ್ನೇಹಿತರೊಡನೆ ಅಲ್ಲಿಗೆ ಬಂದಳು. ಇದು ಸಾರಾಗೆ ಸರಿಹೋಗದಿದ್ದರೂ ಆ ಪರಿಸ್ಥಿತಿಯಲ್ಲಿ ಏನೂ ಹೇಳಲಾಗದೆ ಸುಮ್ಮನಾದರು.

ಸಾರಾ ರಿಡ್ಜ್‌ಲಿನಲ್ಲಿ ಸ್ವಾಮಿ ವಿವೇಕಾನಂದರನ್ನು ಈ ಬಾರಿ ಶ್ರೀಗುರುವಾಗಿಯೇ ಹೆಚ್ಚು ಪಡೆದರು. ಸ್ವಾಮಿ ವಿವೇಕಾನಂದರು ಹೆಚ್ಚು ಹೆಚ್ಚು ತ್ಯಾಗದ ವಿಚಾರ, ದುಃಖವನ್ನೂ ಸಾವನ್ನೂ

ಪ್ರೀತಿಸುವ ಕಲೆಯ ಬಗೆಗೆ ಮಾತನಾಡಿದರು. ಎಲ್ಲ ಕರ್ತವ್ಯ ಕರ್ಮಗಳನ್ನೂ ಕಿತ್ತೊಗೆಯುವ ವಿಚಾರವಾಗಿ ಮಾತನಾಡಿದರು. ಸಾರಾ ರಿಡ್ಜ್‌ಲಿಗೆ ಮುಂಚೆಯೇ ಬರಬಹುದಿತ್ತು. ಆದರೆ ಒಲಿಯಾಳ ಸಂಬಂಧದ ಆಕೆಯ ಕರ್ತವ್ಯಬೋಧೆ ಮುಂದೆ ಹೋಗಲು ಬಿಡಲಿಲ್ಲ. ಒಂದುದಿನ ಸುಮಾರು ಮೂರು ಗಂಟೆಗಳ ಕಾಲ ಸ್ವಾಮಿ ವಿವೇಕಾನಂದರು ಒಲಿಯಳೊಡನೆ ಮಾತನಾಡಿ ಆಕೆಯ ಚೇತನವನ್ನು ಮೇಲೆತ್ತಲು ಪ್ರಯತ್ನಿಸಿದರು.

೧೮೯೯, ನವೆಂಬರ್ ೪ರಂದು ಸ್ವಾಮಿ ವಿವೇಕಾನಂದರು ಒಂದು ಕಾವಿಯ ವಸ್ತ್ರವನ್ನು ಸಾರಾರಿಗಿತ್ತು ಆಕೆಯನ್ನು 'ಸಂನ್ಯಾಸಿನಿ' ಎಂದು ಕರೆದರು. ಶ್ರೀರಾಮಕೃಷ್ಣರ ಹಾಗೂ ಶ್ರೀಮಾತೆಯವರ ಕೆಲಸದ ಹೊಣೆಗಾರಿಕೆಯನ್ನೂ ಆಕೆಗೆ ಒಪ್ಪಿಸಿದರು. ಸ್ವಾಮೀಜಿ ಕ್ರಿಸ್ಟೀನಳನ್ನು ಕಾಣಲು ಡೆಟ್ರಾಯ್ಟ್‌ಗೆ ಹೋಗುವರಿದ್ದರು. ಆಗ ಸಾರಾ ಕ್ರಿಸ್ಟೀನಳನ್ನೂ ಸ್ವಾಮಿ ವಿವೇಕಾನಂದರನ್ನೂ ತನ್ನ ಕೇಂಬ್ರಿಡ್ಜ್‌ನ ಮನೆಗೇ ಆಹ್ವಾನಿಸಿದಳು. ಒಂದು ಪತ್ರದಲ್ಲಿ ಸ್ವಾಮಿ ವಿವೇಕಾನಂದರು ಕ್ರಿಸ್ಟೀನಳಿಗೆ ಈ ರೀತಿ ಬರೆದರು : "ಶ್ರೀಮತಿ ಸಾರಾ ಬುಲ್ ನಿಜವಾಗಿಯೂ ನನ್ನ ತಾಯಿ. ನಾನು ಏನು ಹೇಳಿದರೂ ಆಕೆ ಮಾಡುತ್ತಾರೆ. ನೀನು ಆಕೆಯ ಮನೆಗೆ ಬಾ. ಆಕೆ ನಿಜವಾದ ಸಂತಳು. ಆಕೆಯನ್ನು ನೀನು ಅರಿಯಬೇಕು."

ಸ್ವಾಮಿ ಶಾರದಾನಂದರು ತಮ್ಮ ಶ್ರೀರಾಮಕೃಷ್ಣ ಲೀಲಾ ಪ್ರಸಂಗದಲ್ಲಿ ಶ್ರೀರಾಮಕೃಷ್ಣರ ಆವಶ್ಯಕತೆಗಳನ್ನು ಒದಗಿಸುವ ನಾಲ್ಕು ಜನ ರಸದ್ದಾರರಿದ್ದರೆಂದು ತಿಳಿಸುತ್ತಾರೆ. ಅದರಲ್ಲಿ ಮೊದಲನೆಯವರು ಮಥುರನಾಥ ಬಿಶ್ವಾಸ್, ಎರಡನೆಯವರು ಶಂಭುನಾಥ ಮಲ್ಲಿಕ್, ಸುರೇಂದ್ರನಾಥ ಮಿತ್ರ ಅರ್ಧ ರಸದ್ದಾರರು, ಇನ್ನುಳಿದ ಒಂದೂವರೆ ರಸದ್ದಾರರು ಯಾರು? ಅವರೆಲ್ಲಾ ಗೌರ ವರ್ಣದವರೆಂದು ಶ್ರೀರಾಮಕೃಷ್ಣರು ಹೇಳಿದ್ದರು. ಆದ್ದರಿಂದ ಸ್ವಾಮಿ ಶಾರದಾನಂದರು ಇನ್ನುಳಿದ ಆ ಒಂದೂವರೆ ರಸದ್ದಾರರು ಬಲರಾಮ ಬಸು ಹಾಗೂ ಅಮೆರಿಕದ ಕೆಲಸದಲ್ಲಿ ಸ್ವಾಮಿ ವಿವೇಕಾನಂದರಿಗೆ ನೆರವಾದ ಸಾರಾ ಬುಲ್ ಎಂದು ಅಭಿಪ್ರಾಯಪಟ್ಟಿದ್ದಾರೆ. ಭಗವಂತನಿಂದ ಶ್ರೀರಾಮಕೃಷ್ಣರ ಕೆಲಸಕ್ಕಾಗಿ ಮುಖ್ಯ ಆಧಾರ ಸ್ತಂಭವಾಗಿ ಸಾರಾ ಬುಲ್ ಆರಿಸಲ್ಪಟ್ಟಿದ್ದಾರೆಂದೂ ಸ್ವಾಮಿ ಶಾರದಾನಂದರು ಹೇಳುತ್ತಾರೆ. ಈ ಹೊಣೆಗಾರಿಕೆಯನ್ನು ಸಾರಾ "ಮಹಾರಾಜ್ಞಿ ಮಾತೆ"ಯಂತೆ ಹೊತ್ತರು ಎಂದು ನಿವೇದಿತಾ ಬರೆಯುತ್ತಾರೆ.

ಪ್ಯಾರಿಸ್‌ನಲ್ಲಿ ನಡೆದ ಇಂಟರ್‌ನ್ಯಾಷನಲ್ ಸೈನ್ಸ್ ಆಫ್ ಕಾಂಗ್ರೆಸ್‌ಲ್ಲಿ ಭಾರತದ ವಿಜ್ಞಾನಿಗಳಾದ ಜೆ.ಸಿ. ಬೋಸ್ ಮಾತನಾಡುತ್ತಾರೆ. ಇದನ್ನು ಸ್ವಾಮಿ ವಿವೇಕಾನಂದರು ಪ್ರಶಂಸಿಸುತ್ತಾರೆ. ಸಾರಾ ಒಂದು ವಾರದ ಕಾಲ ಅಲ್ಲಿನ ಸಭೆಗಳಲ್ಲಿ ಭಾಗವಹಿಸಿ, ಬ್ರಿಟನ್ನಿಗೆ ಹಿಂತಿರುಗಿದರು. ಜೆ.ಸಿ.ಬೋಸ್ ಸಸ್ಯಗಳನ್ನು ಕುರಿತು ಹೊಸ ಹೊಸ ಅನ್ವೇಷಣೆಗಳನ್ನು ಮಾಡುತ್ತಿದ್ದರು. ಅವರಿಗೆ ಸಾರಾ ಪ್ರತಿಯೊಂದು ರೀತಿಯಲ್ಲೂ ನೆರವಾಗುತ್ತಾರೆ. ಜೆ.ಸಿ. ಬೋಸ್ ತಮ್ಮ ಒಂದು ಪುಸ್ತಕವನ್ನು ಸಾರಾರಿಗೆ ಅರ್ಪಣೆಮಾಡಿ ಅದರಲ್ಲಿ "ನನ್ನ ತಾಯಿಗಾಗಿ" ಎಂದು ಬರೆದಿದ್ದರು.

೧೯೦೨ರ ಜನವರಿಯಲ್ಲಿ ಸಾರಾ, ನಿವೇದಿತಾ ಮತ್ತು ಶ್ರೀಮತಿ ಸೇವಿಯರ್ ಲಂಡನ್‌ನಿಂದ ಭಾರತಕ್ಕೆ ಬಂದರು. ಸ್ವಾಮಿ ವಿವೇಕಾನಂದರು ಆಗ ವಾರಾಣಸಿಯಲ್ಲಿದ್ದರು. ಅವರನ್ನು ನೋಡಲು ಸಾರಾ ನೇರವಾಗಿ ಅಲ್ಲಿಗೆ ಹೋದರು. ಅಲ್ಲಿ ಸುಮಾರು ಹತ್ತು ದಿನಗಳು ಸ್ವಾಮೀಜಿಯವರೊಡನಿದ್ದುದರಿಂದ ಅವರ ದಿವ್ಯಸಂಗ ಮತ್ತು ಉಪದೇಶದಿಂದ ಸಾರಾರ ನೊಂದ ಹೃದಯಕ್ಕೆ ಎಷ್ಟೋ ಸಾಂತ್ವನ ಸಿಕ್ಕಿತು. ಅನಂತರ ಸಾರಾ ಬೇಲೂರು ಮಠಕ್ಕೆ ಹಿಂದಿರುಗಿದರು. ಸೋದರಿ ನಿವೇದಿತಾರಿಗೂ ಸೋದರಿ ಕ್ರಿಸ್ಟೀನಳಿಗೂ ಅವರ ಶಾಲಾ ಕಾರ್ಯದಲ್ಲಿ ತುಂಬ ನೆರವಾದರು. ೧೯೦೨ರ ಜೂನ್ ೨೬ರಂದು ಸಾರಾ ತಮ್ಮ ಮಗಳು ಕಾಯಿಲೆ ಬಿದ್ದ ಕಾರಣ ಆಕೆಯ ಶುಶ್ರೂಷೆಗಾಗಿ ಭಾರತವನ್ನು ಬಿಟ್ಟು ಲಂಡನ್ ಕಡೆ ಹೊರಟರು. ಅಲ್ಲಿಂದ ಮಗಳನ್ನು ಕರೆದುಕೊಂಡು ನಾರ್ವೆಗೆ ಹೋದರು. ಸ್ವಾಮಿ ವಿವೇಕಾನಂದರು ಸಾರಾರಿಗೆ ಒಂದು ಪತ್ರ ಬರೆದು ಅದರಲ್ಲಿ ಪವಿತ್ರತೆ ಹಾಗೂ ಮಾತೃತ್ವದ ಮಹಿಮೆಯನ್ನು ವಿವರಿಸಿದರು. ಒಲಿಯಾಳ ಆರೋಗ್ಯ ಸ್ವಲ್ಪ ಸುಧಾರಿಸಲು ಸಾರಾ ಸಮಾಧಾನದ ನಿಟ್ಟುಸಿರು ಬಿಡುತ್ತಿದ್ದಂತೆಯೇ ಆಕೆಗೆ ಜುಲೈ ೧೪ರಂದು ಭಾರತದಿಂದ ಒಂದು ವರ್ತಮಾನ ಬರುತ್ತದೆ : ಅದು ಆಕೆಯ ಶ್ರೀಗುರು ವಿವೇಕಾನಂದರ ಮಹಾಸಮಾಧಿಯನ್ನು ಕುರಿತಾದ್ದು. ಆ ಸುದ್ದಿಯನ್ನು ತಂದ ಪದಗಳು ಆಕೆಯನ್ನು ಇರಿಯುವಂತಿದ್ದವು. ಮತ್ತೆ ಮತ್ತೆ ಓದಿದರು. ಅನಂತರ ಒಂದು ತಂತಿಯನ್ನು ಕಳುಹಿಸಿ "ಪ್ರೀತಿಯ ಸಹಾನುಭೂತಿ" ಎಂದು ಮಾತ್ರ ಬರೆಯುತ್ತಾರೆ. ಹೆಚ್ಚಾಗಿ ಬರೆಯಲು ಆಕೆಗೆ ಸಾಧ್ಯವಾಗಲಿಲ್ಲ.

ಧೀರರಾದ ಸಾರಾ ಸ್ವಾಮಿ ವಿವೇಕಾನಂದರ ಕೆಲಸವನ್ನು ಮುಂದುವರಿಸಬೇಕೆಂದು ಆಶಿಸುತ್ತಾರೆ. ಆದರೂ ಅವರ ನಿರ್ಯಾಣದ ಸುದ್ದಿ ಅವರ ಆರೋಗ್ಯವನ್ನು ಪೂರ್ಣವಾಗಿ ಕೆಡಿಸುತ್ತದೆ. ಸ್ವಾಮಿ ಶಾರದಾನಂದರು ಸಾರಾರಿಗೆ ಒಂದು ಪತ್ರ ಬರೆದು ಅದರಲ್ಲಿ ಸ್ವಾಮಿ ವಿವೇಕಾನಂದರ ಮಹಾಸಮಾಧಿಯ ಸಂದರ್ಭವನ್ನು ವರ್ಣಿಸಿದರು : "ಆ ದಿನ ಸ್ವಾಮಿ ವಿವೇಕಾನಂದರು ಅತ್ಯಂತ ಸುಂದರರಾಗಿ ಕಂಡರು. ಅವರ ಮಹಾಸಮಾಧಿಯ ಬಳಿಕ ಅವರ ಕಾರ್ಯ ಹೆಚ್ಚು ಹೆಚ್ಚು ನಡೆಯುತ್ತಿದೆ. ಹೆಚ್ಚಾಗಿ ಯುವಕರು ಅವರ ಸಂದೇಶವನ್ನು ಸ್ವೀಕರಿಸಲು ಮುಂದೆ ಬರುತ್ತಿದ್ದಾರೆ. ನಾವೆಲ್ಲಾ ಅವರ ಜೀವಂತ ಇರುವಿಕೆಯನ್ನು ಅನುಭವಿಸುತ್ತಿದ್ದೇವೆ. ನೀವೂ ಅದೇ ರೀತಿ ಅನುಭವಿಸುತ್ತಿರುವಿರಲ್ಲವೇ?" ಒಂದೇ ವರ್ಷದಲ್ಲಿ ಸಾರಾ ಡಾ. ಜೇಮ್ಸ್ ಹಾಗೂ ತಮ್ಮ ಶ್ರೀಗುರು ವಿವೇಕಾನಂದರನ್ನು ಕಳೆದುಕೊಳ್ಳುತ್ತಾರೆ. ಈಗ ಪೂರ್ವ ಪಶ್ಚಿಮದ ಕೆಲಸವೆಲ್ಲಾ ಒಬ್ಬರೇ ಮಾಡಬೇಕಾಗಿದೆ. ಸಾರಾ ಈ ಕಾರ್ಯವೆಸಗಲು ತಮ್ಮ ನೊಂದ ಹೃದಯದೊಂದಿಗೆ ಮುಂದುವರೆಯುತ್ತಾರೆ. ಆಗ ಜೋ ಅವರ ಆರೋಗ್ಯವೂ ಸರಿಯಾಗಿರಲಿಲ್ಲ. ಅವರು ಸಾರಾರಿಗೆ ಒಂದು ಪತ್ರ ಬರೆದು "ಹೃದಯ ನೋವನ್ನು

ಅನುಭವಿಸುತ್ತಿದೆ... ಅದು ಅನುಭವಿಸಲೇಬೇಕು. ಇಲ್ಲ ದಿದ್ದಲ್ಲಿ ಅದು ಮಾನವಹೃದಯವಾಗಲಾರದು" ಎಂದು ತಿಳಿಸಿದರು.

ಕಲ್ಕತ್ತೆಗೆ ಬಂದ ಸಾರಾ, ಶಾರದಾನಂದರನ್ನೂ ಕ್ರಿಸ್ಟೀನ ಳನ್ನೂ ಭೇಟಿಮಾಡಿದರು. ನಿವೇದಿತಾ ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸಿದ್ದರು. ಈ ಬಾರಿ ಸುಮಾರು ಆರು ತಿಂಗಳ ಕಾಲ ಭಾರತದಲ್ಲಿದ್ದು ನಿವೇದಿತಾ ಹಾಗೂ ಕ್ರಿಸ್ಟೀನರಿಗೆ ಅವರವರ ಕೆಲಸದಲ್ಲಿ ಸ್ಫೂರ್ತಿ, ಉತ್ತೇಜನ ತುಂಬಿ, ಅವರಿಗೆ ಬೇಕಾದ ನೆರವನ್ನೂ ನೀಡಿ, ನಿವೇದಿತಾ ಹಾಗೂ ಡಾ. ಬೋಸ್‌ರ ಪುಸ್ತಕಗಳ ಹಸ್ತಪ್ರತಿ ತಯಾರುಮಾಡಲು ಅವನ್ನು ತೆಗೆದುಕೊಂಡು ಲಂಡನ್‌ಗೆ ಹಿಂತಿರುಗಿದರು.

೧೯೦೫ರಲ್ಲಿ ಸಾರಾ ಗ್ರೀನೆಕರ್‌ನಲ್ಲಿ ಒಂದು ಹೊಸ ಮನೆ ಯನ್ನು ಕೊಂಡುಕೊಂಡು ಅಲ್ಲಿ ತಮ್ಮ ಬೇಸಿಗೆಯ ದಿನಗಳನ್ನು ಕಳೆ ದರು. ಅಲ್ಲಿ ಅವರು ವೈಚಾರಿಕ ಭಾಷಣಗಳನ್ನು ಏರ್ಪಡಿಸು ವುದರಲ್ಲೂ ವಿವಿಧ ವ್ಯಕ್ತಿಗಳಿಗೆ ಅವರವರ ಅಭಿರುಚಿಗೆ ಅನು ಸಾರವಾಗಿ ಮುಂದುವರೆಯಲು ಪ್ರೇರೇಪಣೆ ನೀಡುವುದ ರಲ್ಲಿಯೂ ತಮ್ಮನ್ನು ತೊಡಗಿಸಿಕೊಂಡರು. ಅನೇಕರಿಗೆ ವೇದಾಂತ ವಿಚಾರಗಳಲ್ಲಿ ಉತ್ಸಾಹ ಉಂಟುಮಾಡಿದರು. ಸಾರಾರ ಅತಿಥಿ ಯಾಗಿದ್ದ ಶ್ರೀ ಹ್ಯಾನ್‌ಫೋರ್ಡ್ ಹೆಂಡೆರ್‌ಸನ್ ಎನ್ನುವರು ವೇದಾಂತದಲ್ಲಿ ಉತ್ಸಾಹ ಪಡೆದು "*The Character*" ಎಂಬ ಪುಸ್ತಕ ಬರೆದರು. ಅದರಲ್ಲಿ ಆತ ಮನುಷ್ಯ ಭಗವದ್ಗೀತೆಯ ಉಪದೇಶಗಳನ್ನು ಆಧರಿಸಿ ಯಾವ ರೀತಿ ಸಾಕ್ಷೀ ಪ್ರಜ್ಞೆ ಯನ್ನು ಪಡೆಯಬಹುದು ಎಂಬುದರ ಬಗೆಗೆ ವಿವರಿಸಿದ್ದಾರೆ. ಮುಂದೆ ಆತ ರಾಮಕೃಷ್ಣ ಮಠ ಹಾಗೂ ನಿವೇದಿತಾ ಶಾಲೆಯನ್ನು ಸಂದರ್ಶಿಸಿ *The Lighted Lamp* ಎಂಬ ಪುಸ್ತಕ ಬರೆದು ಅದನ್ನು ಸಾರಾರಿಗೆ ನಿವೇದಿಸುತ್ತಾರೆ. ಸಾರಾರ ಅತ್ಯಂತ ಶ್ರಮ ದಿಂದಾಗಿ ನಿವೇದಿತೆಯ *The Web of Indian Life* ಪ್ರಕಟನೆ ಗೊಳ್ಳುತ್ತದೆ.

ಲಾಲಾ ಲಜಪತ್ ರಾಯ್ ಸಾರಾರನ್ನು ಲಂಡನ್, ಬಾಸ್ಟನ್ ಮುಂತಾದ ಸ್ಥಳಗಳಲ್ಲಿ ಸಂದರ್ಶಿಸಿ ಆಕೆಯಿಂದ ಅನೇಕ ತರಹದ ಸಹಾಯಗಳನ್ನು ಪಡೆದರು. ಭಾರತದ ಯುವಕರು ಹೆಚ್ಚಿನ ವಿದ್ಯಾ ಭ್ಯಾಸವನ್ನು ಪಡೆಯುವುದರ ಬಗೆಗೆ ಲಾಲಾ ಅವರು ಸಾರಾ ರೊಂದಿಗೆ ಚರ್ಚೆ ನಡೆಸಿದರು. ಸಾರಾ ಗ್ರೀನೆಕರ್‌ನಲ್ಲಿ ಜಪಾನ್‌ನ ಕಲೆಗಾರರನ್ನು ಆಹ್ವಾನಿಸಿ ಒಂದು ಭವ್ಯವಾದ ವಸ್ತುಪ್ರದರ್ಶನ ಏರ್ಪಡಿಸಿದರು. ಇದು ಎಲ್ಲರಿಂದಲೂ ಪ್ರಶಂಸಿಸಲ್ಪಟ್ಟಿತು. ಜಪಾನಿನ ಕಲೆಗಾರರಾದ ಓಕಾಕುರ ಸಾರಾರ ಅತಿಥಿಯಾಗಿದ್ದರು.

ಸಾರಾರ ಮಗಳು ಓಲಿಯಾ ತನ್ನ ಮೊದಲ ಪತಿಯಿಂದ ವಿಚ್ಛೇದನ ಪಡೆದು ತನ್ನ ಇಚ್ಛಾನುಸಾರ ನಡೆಯುತ್ತಿದ್ದಳು. ಸಾರಾ ತನ್ನ ಮಗಳೊಂದಿಗೆ ಯಾವುದೇ ತರಹದ ಪ್ರೀತಿಯ ಸಂಬಂಧ ಇಟ್ಟುಕೊಳ್ಳಲಾಗಲಿಲ್ಲ. ಓಲಿಯಾಳಿಂದಾಗಿ ಸಾರಾರ ವೈಯಕ್ತಿಕ ಜೀವನ ದುಃಖದಿಂದ ತುಂಬಿತ್ತು. ನಿವೇದಿತಾ ಸಾರಾರಿಗೆ ಬರೆದ ಒಂದು ಪತ್ರದಲ್ಲಿ, "ಪ್ರಪಂಚಕ್ಕೆ ಸಹಾಯ ಮಾಡಲು ಬರುವ ವ್ಯಕ್ತಿಗಳಿಗೆ ಅವರ ಸ್ವಂತ ವೈಯಕ್ತಿಕ ಜೀವನದಲ್ಲಿ ಸುಖವಿರು ವುದಿಲ್ಲ" ಎಂದು ತಿಳಿಸಿದ್ದಾರೆ.

ಇತರರ ಯಾವುದೇ ಕುಂದುಕೊರತೆಗಳನ್ನೂ ಗಣಿಸದೆ ಸಾರಾ ಈಗ ಎಲ್ಲರಿಗೂ ಅವರವರ ಆದರ್ಶಗಳನ್ನು ಸಾಕ್ಷಾತ್ಕರಿಸಿ ಕೊಳ್ಳಲು ಸಹಾಯ ಮಾಡತೊಡಗಿದರು. ನಿವೇದಿತಾ ಮತ್ತು ಕ್ರಿಸ್ಟೀನರಿಗೆ ಪೂರ್ಣ ಬೆಂಬಲವಿತ್ತರು. ತಮ್ಮ ಮಗಳಿಗೆ ಪೂರ್ಣ ಸ್ವಾತಂತ್ರ್ಯವನ್ನಿತ್ತರು. ಓಲಿಯಾ ತನ್ನ ಎರಡನೆಯ ಪತಿ ಯಿಂದ (ವಿವಾಹವಾಗದೆ) ಒಂದು ಹೆಣ್ಣು ಮಗುವನ್ನು ಪಡೆ ದರೂ, "ಓರ್ವ ಮಗುವನ್ನು ದತ್ತು ಪಡೆದೆ" ಎಂದು ಪತ್ರಿಕೆ ಗಳಿಗೆ ತಿಳಿಸಿದಳು. ಈ ಸತ್ಯ ಸಾರಾರಿಗೆ ತಿಳಿದಿದ್ದರೂ ಆ ಮಗು ವಿಗಾಗಿ ಉಡುಗೊರೆ ನೀಡುತ್ತಾರೆ. ಡಾ. ಬೋಸ್ ಮತ್ತು ಓಕಾಕುರರಿಗೆ ಎಲ್ಲ ರೀತಿಯ ಸಹಾಯ ಮಾಡುತ್ತಾರೆ, ಅವರ ಆದರ್ಶದ ಸಾಕ್ಷಾತ್ಕಾರಕ್ಕಾಗಿ. ಸಾರಾ ಹಾಗೂ ಜೋ ಇಬ್ಬರೂ ನಿವೇದಿತಾರಿಗೆ *The Master as I saw Him* (ನಾ ಕಂಡಂತೆ ನನ್ನ ಗುರುದೇವ) ಎಂಬ ಗ್ರಂಥರಚನೆಯಲ್ಲಿ ಬಹುಮಟ್ಟಿಗೆ ಸಹಾಯ ಮಾಡಿದರು. ಸಾರಾ ತಮಗೆ ವಿವೇಕಾನಂದರು ಬರೆ ದಿದ್ದ ಪತ್ರಗಳನ್ನೆಲ್ಲಾ ನಿವೇದಿತಾಗೆ ಕೊಟ್ಟು, ತಮ್ಮ ಅತ್ಯ ಮೂಲ್ಯವಾದ ಸ್ವಂತ ದಿನಚರಿಯನ್ನೂ ಆಕೆಗೆ ನೀಡಿ ಅದರಲ್ಲಿ ತಿದ್ದುಪಡಿ ಮಾಡಿ ಆಕೆಯ ಪುಸ್ತಕಕ್ಕೆ ನೆರವನ್ನು ಪಡೆಯಬಹು ದೆಂದು ತಿಳಿಸಿದರು. ನಿವೇದಿತಾರ *The Master As I Saw Him* ಗ್ರಂಥದ ಸುಮಾರು ಅರ್ಧಭಾಗ ಸಾರಾರ ದಿನಚರಿ ಯಿಂದ ತೆಗೆದುಕೊಂಡುದಾಗಿದೆ.

ಗ್ರೀನೆಕರ್‌ನ ತನ್ನ ಮನೆಯಲ್ಲಿ ಸಾರಾ ಆನಂದದಿಂದ ದಿನ ಗಳನ್ನು ಕಳೆದರು. ಪ್ರತಿದಿನ 'ಪ್ರವಾದಿ ದೇವದಾರು' (Prophet Pine —ಸ್ವಾಮಿ ವಿವೇಕಾನಂದರು ಇದೇ ಮರದ ಕೆಳಗೆ ಕುಳಿತು ಸಮಾಧಿಸ್ಥರಾಗಿದ್ದುದು) ಕೆಳಗೆ ಕುಳಿತು ಧ್ಯಾನ ಮಾಡುತ್ತಿದ್ದರು. ಆ ಸ್ಥಳದಲ್ಲೇ ಸಾರಾ ಮೊದಲು ಸ್ವಾಮಿ ವಿವೇಕಾನಂದರನ್ನು ಅರಿತಿದ್ದು, ಅವರ ನಗು ಆಕೆಯ ಪ್ರಪಂಚವನ್ನು ಆನಂದದಿಂದ ತುಂಬಿದ್ದು, ಹಾಗೂ ಸ್ವಾಮಿ ವಿವೇಕಾನಂದರ ಕಳವಳ ಆಕೆಗೆ ಕಣ್ಣೀರು ತಂದದ್ದು. ಸ್ವಾಮಿ ವಿವೇಕಾನಂದರು ಆಕೆಯ ದಿವ್ಯಶಿಶುವಾಗಿದ್ದರು. ಸ್ವಾಮಿಗಳ ಪ್ರೇಮ ಆಕೆಯ ಹೃದಯವನ್ನು ಅಮೃತತ್ವದ ಸಾಗರ ವನ್ನಾಗಿ ಮಾಡಿತ್ತು. ದೀರ್ಘಕಾಲದ ಸಾಧನೆಯಿಂದ ಈಗ ಸಾರಾ ಪೂರ್ಣ ನಿರ್ಲಿಪ್ತರಾಗಿದ್ದರು ಹಾಗೂ ಆಕೆಯ ಪ್ರೀತಿಯಲ್ಲಿ ಯಾವ ದೋಷಗಳೂ ಇರಲಿಲ್ಲ. ಈಗ ಆಕೆ ಅರವತ್ತರ ಅಂಚಿನಲ್ಲಿದ್ದಾರೆ ವಯಸ್ಸಿನಲ್ಲಿ. ೧೯೧೦ರಲ್ಲಿ ನಿವೇದಿತೆಯ *The Master As I Saw Him* ಗ್ರಂಥ ಪ್ರಕಟನೆಗೊಂಡಿತು.

ಸಾರಾರ ಆರೋಗ್ಯ ಕುಂದುತ್ತಾ ಬಂದಿತು. ನರಗಳ ದೌರ್ಬಲ್ಯ ದಿಂದ ನಡೆಯುವುದೇ ಕಷ್ಟವಾಯಿತು. ನವೆಂಬರ್ ೧೯೧೦ರಲ್ಲಿ ಸಾರಾರ ಆರೋಗ್ಯ ಪೂರ್ಣ ಕೆಟ್ಟಿತು. ಆಕೆಯ ಶುಶ್ರೂಷೆಗಾಗಿ ನಿವೇದಿತಾ ಅಲ್ಲಿಗೆ ಬಂದರು. ಸಾರಾರ ಆರೋಗ್ಯ ಚೆನ್ನಾಗಲಿ

ಎಂದು ಪ್ರಾರ್ಥಿಸಬೇಕೆಂದು ನಿವೇದಿತಾ ಶ್ರೀಮಾತೆ ಶಾರದಾ ದೇವಿಯವರಿಗೆ ಪತ್ರ ಬರೆಯುತ್ತಾರೆ. ನಿವೇದಿತಾರ ಜೊತೆಯಲ್ಲಿರುವಾಗ ಸಾರಾರ ಮನಸ್ಸು ಸ್ವಾಮಿ ವಿವೇಕಾನಂದರ ಹಾಗೂ ವೇದಾಂತದ ಭಾವನೆಗಳಿಂದ ತುಂಬಿರುತ್ತಿತ್ತು. ಈಗ ಆಕೆಯ ಹೃದಯ ಬಹುಮಟ್ಟಿಗೆ ವಿಕಾಸಗೊಂಡಿತ್ತು. ಅವರ ಮಗಳ ಬಗೆಗಿನ ಕಹಿ ಭಾವನೆಗಳೆಲ್ಲ ಸ್ವಾಮಿ ವಿವೇಕಾನಂದರ ಕೃಪೆಯಿಂದ ಮಾಯವಾಗಿದ್ದವು. ಸಾರಾ ಆಧ್ಯಾತ್ಮಿಕ ತಾಯ್ತನದ ಪೂರ್ಣ ಅವಸ್ಥೆಯನ್ನು ಮುಟ್ಟಿದ್ದರು. ೧೯೧೧ ಜನವರಿ ೧೭ರಂದು ಅವರು ಶಾಂತವಾಗಿಯೇ ಇದ್ದರು. ಮಲಗುವ ಮುನ್ನ ನಿವೇದಿತಾಗೆ ಸ್ವಾಮೀಜಿಯವರ ಪ್ರತಿಮೆಯನ್ನು ತಮ್ಮ ಡೆಸ್ಕ್ ಮೇಲಿಡಲು ಹೇಳಿದರು. ಆದರೆ ಅದು ಬುದ್ಧನ ಪ್ರತಿಮೆಯಾಗಿತ್ತು. ಸಾರಾ ಬುದ್ಧನನ್ನು ಸ್ವಾಮೀಜಿಯವರಲ್ಲಿ ಕಂಡರು. ಮರುದಿನ ಬೆಳಗ್ಗೆ ಅತ್ಯಂತ ಶಾಂತಿಯಿಂದ ಸಾರಾ ತಮ್ಮ ದೇಹವನ್ನು ತೊರೆದು ಶಾಂತಿಧಾಮವನ್ನು ಹೊಂದಿದರು. ಸಾರಾರಿಗೆ ಇನ್ನೂ ಸ್ವಲ್ಪ ಪ್ರಜ್ಞೆ ಇರುವಾಗಲೇ ನಿವೇದಿತೆ ಅವರ ಕಿವಿಯಲ್ಲಿ "ಹರಿ ಓಂ ರಾಮಕೃಷ್ಣ" ಪಠಿಸಿದರು.

ಮಹಾಮಾಯೆಯ ವಿಚಿತ್ರ ಸೃಷ್ಟಿರಚನೆಯಲ್ಲಿ ತ್ಯಾಗಿಗಳೂ, ಅಪೂರ್ವದಾನಿಗಳೂ, ಪವಿತ್ರರೂ ಹುಟ್ಟುವಂತೆ, ಸ್ವಾರ್ಥಿಗಳೂ, ಕ್ರೂರಿಗಳೂ ಹುಟ್ಟುತ್ತಾರೆ. ಶ್ರೀಮಾತೆ ಶಾರದಾದೇವಿಯವರನ್ನು ಕೊಟ್ಟಂತಹ ಮನೆ ಇತರ ಅವರ ಬಂಧುಗಳನ್ನೂ ಕೊಟ್ಟಿತು. ಆಕೆಯ ಇತರ ಬಂಧುಗಳು ಇದ್ದ ರೀತಿ! ರಾಧು ಶ್ರೀಮಾತೆಯವರನ್ನು ಕಾಡಿದಂತೆ ಓಲಿಯಾಳೂ ಸಾರಾರನ್ನು ಕಾಡಿದಳು, ಹಿಂಸಿಸಿದಳು. ಇದು ವಿಧಿನಿಯಮದಂತೆ. ರಾಧುವಿನ ಪಾತ್ರ ಶ್ರೀಮಾತೆಯವರ ಜೀವನದಲ್ಲಿತ್ತು. ಓಲಿಯಾಳ ಪಾತ್ರ ಸಾರಾರ ಜೀವನದಲ್ಲಿತ್ತು. ಓಲಿಯಾ ಹಾಗೂ ಆಕೆಯ ಮಗಳು ಎಡ್ವಿನಾ ಸಾರಾರ ಆಧ್ಯಾತ್ಮಿಕ ತರಬೇತಿಗೆ ನಿಮಿತ್ತರಾಗಿದ್ದರು. ಇವರ ಸಂಬಂಧದಿಂದ ಸಾರಾ ತಿತಿಕ್ಷೆ ಹಾಗೂ ಕ್ಷಮೆಯನ್ನು ಬೆಳೆಸಿಕೊಂಡರು. ಸಾರಾರ ವೈಯಕ್ತಿಕ ಜೀವನ ದುಃಖ ಮತ್ತು ಸೋಲಿನದಾಗಿದ್ದರೂ, ಆಕೆಯ ಆಧ್ಯಾತ್ಮಿಕ ಜಯ ಬಹುಮೇಲ್ಮಟ್ಟದ್ದು. ಆಕೆ ತನ್ನ ತಾಯ್ತನದ ಪ್ರೀತಿಯಲ್ಲಿ ಎಷ್ಟು ಹಿರಿಯರಾದರೆಂದರೆ ಆಕೆ ದುರ್ಜನ-ಸಜ್ಜನರ ತಾಯಿಯಾದರು. ಸಾರಾ ಸ್ವಾಮಿ ವಿವೇಕಾನಂದರ ಆದರ್ಶ ಮಹಿಳೆ. ಸಾರಾ ಕೃಪಾಮಯಿಯೂ, ಪ್ರೇಮಮೂರ್ತಿಯೂ, ಕ್ಷಮಾಶೀಲರೂ, ಬುದ್ಧಿ ಹಾಗೂ ಹೃದಯದಲ್ಲಿ ಹಿರಿಯರೂ ಹಾಗೂ ಆಧ್ಯಾತ್ಮಿಕತೆಯಲ್ಲಿ ಅತ್ಯಂತ ಉನ್ನತ ಸ್ತರಗಳನ್ನು ಏರಿದವರೂ ಆಗಿದ್ದರು.

◆

---

## ಪುಸ್ತಕ ಪರಿಚಯ

**ಅದ್ಭುತ ಚರಿತೆ ಶಾರದಾಮಾತೆ**

ಲೇಖಕರು : ಸ್ವಾಮಿ ಹರ್ಷಾನಂದ

ಪ್ರಕಾಶಕರು : ರಾಮಕೃಷ್ಣ ಮಠ, ಬಸವನಗುಡಿ ರಸ್ತೆ, ಬೆಂಗಳೂರು-560 019 ಬೆಲೆ : ರೂ. 5/-

ಶ್ರೀಮಾತೆ ಶಾರದಾದೇವಿಯವರ ಜೀವನ ಮತ್ತು ವ್ಯಕ್ತಿತ್ವವು ಪವಿತ್ರವೂ ಹೌದು, ಅದ್ಭುತವೂ ಹೌದು. ವನಸುಮದಂತೆ ಬಾಳಿ ಬೆಳಗಿದ ಶ್ರೀಮಾತೆಯವರ ಜೀವನದ ಪರಿಶುದ್ಧ ಸುಗಂಧ ದೇಶವಿದೇಶಗಳಲ್ಲಿ, ಲಕ್ಷಾಂತರ ಜನರ ಹೃನ್ಮನಗಳ ಕೊಳೆಯನ್ನು ತೊಳೆದು ಬೆಳಗಿದೆ, ಬೆಳಗುತ್ತಲಿದೆ, ಬೆಳಗಲಿದೆ. ಈ ವರ್ಷ ಒಂದು ಸೌಭಾಗ್ಯದ ವರ್ಷ, ಶ್ರೀಮಾತೆಯವರ ೧೫೦ನೆ ಜನ್ಮಜಯಂತಿಯ ಮಹೋತ್ಸವದ ವರ್ಷ. ಶ್ರೀಶಾರದಾದೇವಿಯವರ ಅಮೃತೋಪಮ ಜೀವನ ಮತ್ತು ಸಂದೇಶಗಳನ್ನು ಹೆಚ್ಚು ಹೆಚ್ಚು ಜನಕ್ಕೆ ತಲುಪಿಸುವ ಮಹೋನ್ನತ ಕಾರ್ಯಗಳು ಈಗ ನಡೆಯುತ್ತಲಿವೆ. ಅಂತಹ ಪ್ರಯತ್ನಗಳಲ್ಲಿ ವಿಶಿಷ್ಟವಾಗಿ ಎದ್ದು ನಿಲ್ಲುವುದೆಂದರೆ, ಚಿಕ್ಕದಾದರೂ, ಮಹತ್ತಿನಲ್ಲಿ, ಗುಣದಲ್ಲಿ ಮತ್ತು ವಿಷಯಗಾಂಭೀರ್ಯದಲ್ಲಿ ಹಿರಿದಾದ ಈ ಮೇಲಿನ ಪುಸ್ತಕ.

ಸ್ವಾಮಿ ಹರ್ಷಾನಂದಜಿಯವರು ಅಂಗೈ ಕನ್ನಡಿಯಲ್ಲಿ ಆಕಾಶವನ್ನೇ ಹಿಡಿದು ತೋರಿಸುವಂತೆ, ಶ್ರೀಮಾತೆಯವರ ಜೀವನದ ಹಲವು ಅದ್ಭುತ ಮುಖಗಳನ್ನು ಸರಳವಾದ, ಅದೇ ಸಮಯದಲ್ಲಿ ನಿರ್ದುಷ್ಟವಾದ ಭಾಷೆಯಲ್ಲಿ, ಮನರಂಜಿಸುವ ಶೈಲಿಯಲ್ಲಿ ನಮ್ಮ ಮುಂದಿಟ್ಟಿದ್ದಾರೆ. ೧೯ ಶೀರ್ಷಿಕೆಗಳ ಅಡಿಯಲ್ಲಿ ಇರುವ ಚಿಕ್ಕ ಚಿಕ್ಕ ಅಧ್ಯಾಯಗಳಲ್ಲಿ ಮಹಾ ಆದರ್ಶಮೂರ್ತಿಯಾದ ಶ್ರೀಶಾರದಾದೇವಿಯವರ ಜೀವನ ಮತ್ತು ಉಪದೇಶಗಳು ಸಾಮಾಜಿಕ, ತಾತ್ತ್ವಿಕ, ಆಧ್ಯಾತ್ಮಿಕ ಮತ್ತು ಮಾನವತೆಯ ನೆಲೆಗಳಲ್ಲಿ ಹೃದಯಂಗಮವಾಗಿ ಚಿತ್ರಿತವಾಗಿವೆ.

ಶ್ರೀಮಾತೆಯವರ ಪಾದಗಳಲ್ಲಿ ಸಮರ್ಪಿಸಿದ ಬೌದ್ಧಿಕ ಕೊಡುಗೆಯಾದ ಇದರ ಶ್ರೇಯಸ್ಸು ಹೆಚ್ಚಿರುವುದು, ಬೆಲೆಬಾಳುವ ಹಾಲುಕಾಗದದಲ್ಲಿ ಮುದ್ರಿತವಾದ ಶ್ರೀಮಾತೆಯವರ ವರ್ಣರಂಜಿತ ಚಿತ್ರಗಳಿಂದ. ಒಳ್ಳೆಯ ದರ್ಜೆಯ ಬಿಳುಪು ಕಾಗದದ ಮೇಲೆ ಅಂದವಾಗಿ ಮುದ್ರಿತಗೊಂಡು, ದಪ್ಪನೆಯ ಆರ್ಟ್ ಕಾರ್ಡಿನ ಮೇಲೆ ಇರುವ ಮನೋಹರ ವರ್ಣರಂಜಿತ ವಿನ್ಯಾಸದ ರಕ್ಷಾಕವಚವುಳ್ಳ ಈ ಪುಸ್ತಕದ ಬೆಲೆ ಕೇವಲ ಐದು ರೂಪಾಯಿಗಳೆಂದರೆ ಎಂತಹವನೂ ನಂಬದೇ ಹೋದಾನು.

ಶ್ರೀಮಾತೆಯವರ ಸ್ಮರಣೆಯನ್ನು ಸ್ತೋತ್ರಪಠಣಗಳ ಮೂಲಕ ಮಾಡಲಿಚ್ಛಿಸುವ ಭಕ್ತರ ಅನುಕೂಲಕ್ಕಾಗಿ ಶ್ರೀಶಾರದಾದೇವಿ ಅಷ್ಟೋತ್ತರ ಶತನಾಮ ಸ್ತೋತ್ರ ಮತ್ತು ನಾಮಾವಲಿಗಳೂ ಈ ಪುಸ್ತಕದಲ್ಲಿ ಅಡಕವಾಗಿವೆ.

ಸ್ವಾಮಿ ಹರ್ಷಾನಂದಜಿಯವರ ವಿದ್ವತ್‌ಭರಿತ ಮೂಲ ಆಂಗ್ಲ ಗ್ರಂಥದ ಸುಲಲಿತ ಕನ್ನಡ ಅನುವಾದ ಶ್ರೀ ಎಚ್.ವಿ. ವಿಶ್ವನಾಥ ಅವರದು. ಪವಿತ್ರ ಚರಿತೆಯಾದ ಆ ಮಹಾತಾಯಿಯ ವೃತ್ತಾಂತವನ್ನು ಇಷ್ಟೊಂದು ಸುಂದರವಾಗಿ, ಎಲ್ಲರಿಗೂ ಕೈಗೆಟಕುವ ಬೆಲೆ ಇಟ್ಟು ಪ್ರಕಟಿಸಿರುವ ಸ್ವಾಮೀಜಿಯವರು ಸ್ತುತ್ಯರ್ಹರು. ಇದರ ಸದುಪಯೋಗವನ್ನು ಪಡೆದುಕೊಳ್ಳುವ ಜವಾಬ್ದಾರಿ ಮಾತ್ರ ನಮ್ಮನಿಮ್ಮೆಲ್ಲರದು.

—ಸ್ವಾಮಿ [illegible]